9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಎಸ್.ಸಿ.ನಂ.120/2019

(ಚಾ.ಸಾ.3/ಪ್ರಾ.ಸಾ.3)

ತಾಃ26-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು	ನಾಗರಾಜು
ತಂದೆಯ ಹೆಸರು	ಕೃಷ್ಣಪ್ಪ
ವಯಸ್ಸು	44 ವರ್ಷ
ಉದ್ಯೋಗ	ವ್ಯವಸಾಯ
ವಾಸ ಸ್ಥಳ	ದಳಸಗೆರೆ

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ.1 ರವರು ನನ್ನ ಅಣ್ಣನಾದ ಚಾಸಾ.5 ರವರ ಮಗನಾಗಿರುತ್ತಾರೆ. ಚಾಸಾ.2 ನನ್ನ ಹೆಂಡತಿಯಾಗಿದ್ದು, ಚಾಸಾ.4 ಕೃಷ್ಣಪ್ಪ ನನ್ನ ತಂದೆಯಾಗಿದ್ದು ಅವರು 1 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ನನಗೆ ಎಲ್ಲಾ ಆರೋಪಿತರ ಪರಿಚಯ ಇದ್ದು ಅವರೆಲ್ಲರೂ ನಮ್ಮ ಸಂಬಂಧಿಕರಾಗಿದ್ದು 3 ಮತ್ತು 4 ನೇ ಆರೋಪಿತರು ಮೃತಪಟ್ಟಿರುತ್ತಾರೆ. ನಮಗೆ ದಳಸಗೆರೆ ಗ್ರಾಮದಲ್ಲಿ ಸರ್ವೆ ನಂ.171 ರಲ್ಲಿ 13 ಕಾಲು ಗುಂಟೆ ಜಮೀನು ಇರುತ್ತದೆ. ಸದರಿ ಸ್ವತ್ತು ಚಾಸಾ.4 ಕೃಷ್ಣಪ್ಪ ಇವರ ಹೆಸರಿನಲ್ಲಿದ್ದು, ಅವರ ಸ್ವಾಧೀನಾನುಭಾವದಲ್ಲಿ ಇರುತ್ತದೆ. ಸದರಿ ಸ್ವತ್ತಿನಲ್ಲಿ ನಾವು ಹಾಗೂ ಆರೋಪಿತರು ಮನೆಗಳನ್ನು ಕಟ್ಟಿದ್ದು ಉಳಿದ ಜಾಗ ಖಾಲಿ ಇರುತ್ತದೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನಮಗೂ ಹಾಗೂ 4 ನೇ ಆರೋಪಿ ಕುಟುಂಬಕ್ಕು ಆಗಾಗ ಗಲಾಟೆ ಆಗುತ್ತಿದ್ದು, ಊರಿನ ಹಿರಿಯರು ಹಾಗೂ ಪಂಚಾಯ್ತಿದಾರರು ಅದರ ಬಗ್ಗೆ ನ್ಯಾಯ ತೀರ್ಮಾನ ಮಾಡೋಣ

ಎಂದು ಹೇಳುತ್ತಿದ್ದರು. ದಿನಾಂಕ 13-10-2018 ರಂದು ಬೆಳಗ್ಗೆ 11ಃ00 ಗಂಟೆ ಸಮಯದಲ್ಲಿ ಎಲ್ಲಾ ಆರೋಪಿತರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ನಮ್ಮ ಜಮೀನಿಗೆ ಚಪ್ಪಡಿ ಕಲ್ಲನ್ನು ಹಾಕಲು ಬಂದಿದ್ದರು. ಆಗ ಚಾಸಾ.4 ಕೃಷ್ಣಪ್ಪ ಇವರು ಆರೋಪಿತರ ಬಳಿ ಹೋಗಿ ಆ ಜಮೀನು ತನಗೆ ಸೇರಿದ್ದು, ಚಪ್ಪಡಿ ಕಲ್ಲನ್ನು ಹಾಕುವುದು ಬೇಡ ಕುಳಿತಿ ಮಾತನಾಡೋಣ ಎಂದು ಹೇಳಿ ಹೆಚ್ ಕ್ರಾಸ್ ಗೆ ಹೋಗಿರುತ್ತಾರೆ. ಪುನಃ ಅದೇ ದಿನ ಸಂಜೆ 04ಃ00 ಗಂಟೆಗೆ ಎಲ್ಲಾ ಆರೋಪಿತರು ತಮ್ಮ ಬಳಿ ಕಬ್ಬಿಣದ ರಾಡ್ ಹಾಗೂ ಕಟ್ಟಿಗೆ ಹಿಡಿದುಕೊಂಡು ಬಂದು ಜಮೀನಿನಲ್ಲಿ ಚಪ್ಪಡಿ ಕಲ್ಲನ್ನು ಹೂಳುತ್ತಿದ್ದರು. ಆಗ ನಾನು, ಚಾಸಾ.1 ಮತ್ತು ಚಾಸಾ.2 ರವರು ಸ್ಥಳಕ್ಕೆ ಹೋಗಿ ಆರೋಪಿತರಿಗೆ ಕಲ್ಲು ಚಪ್ಪಡಿಯನ್ನು ಹೂಳುವುದು ಬೇಡ, ಚಾಸಾ.4 ರವರು ಬಂದ ನಂತರ ಮಾತನಾಡೋಣ ಎಂದು ನಾವೆಲ್ಲರೂ ತಿಳಿಸಿರುತ್ತೇವೆ, ಆಗ 1 ನೇ ಆರೋಪಿ ಸೂಳೆ ಮಕ್ಕಳ ಲೋಫರ್ ನನ್ನ ಮಕ್ಕಳ ಎಂದು ಬೈದು ಯಾರಾದರು ಬಂದಲ್ಲಿ ಮುಗಿಸುವುದಾಗಿ ಬೆದರಿಕೆ ಹಾಕಿರುತ್ತಾರೆ.

2. ನಂತರ ಚಾಸಾ.1 ರವರ ತಲೆಯ ಮುಂಭಾಗಕ್ಕೆ 1 ನೇ ಆರೋಪಿ ಮಂಜುನಾಥ್ ಅವರು ಕಬ್ಬಿಣದ ರಾಡ್ ನಿಂದ ಹೊಡೆದಿರುತ್ತಾರೆ. ಆಗ ನಾನು ಹಾಗೂ ಚಾಸಾ.2 ರವರು ಗಲಾಟೆ ಬಿಡಿಸಲು ಹೋದಾಗ 3 ನೇ ಆರೋಪಿ ರಾಜಣ್ಣ ಚಾಸಾ.2 ರವರ ಬಟ್ಟೆ ಹಿಡಿದು ಎಳೆದಾಡಿ ಬಲ ಕೈ ತಿರುಚಿ ದೊಣ್ಣೆಯಿಂದ ಚಾಸಾ.2 ರವರಿಗೆ ಹಲ್ಲೆ ಮಾಡಿರುತ್ತಾರೆ. ನಂತರ 2 ನೇ ಆರೋಪಿ 3 ನೇ ಆರೋಪಿಯಿಂದ ದೊಣ್ಣೆ ಕಿತ್ತುಕೊಂಡು ನನಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡಿದ್ದು, ಆದರೂ ಒಂದು ಏಟು ನನ್ನ ಕೈಗೆ ಬಿದ್ದಿರುತ್ತದೆ. ಅಷ್ಟರಲ್ಲಿ ನಂತರ ಚಾಸಾ.5 ರವರು ಸ್ಥಳಕ್ಕೆ ಬಂದು ಗಲಾಟೆಯನ್ನು ಬಿಡಿಸಿ, ಮೋಟಾರ್ ಬೈಕ್ ನಲ್ಲಿ ಚಾಸಾ.1 ರವರನ್ನು ನಂದಗುಡಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ನಾನು ಹಾಗೂ ಚಾಸಾ.2 ರವರು ಮತ್ತೊಂದು ಬೈಕ್ ನಲ್ಲಿ ಹೋಗಿ ನಂದಗುಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ. ಆರೋಪಿತರು

ಹಲ್ಲೆಗೆ ಉಪಯೋಗಿಸಿದ ರಾಡ್ ಹಾಗೂ ದೊಣ್ಣೆಯನ್ನು ಸಾಕ್ಷಿದಾರರು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಅದೇ ರೀತಿ ನಿಪಿ.3 ರಿಂದ 6 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಘಟನೆಯ ಬಗ್ಗೆ ಪೋಲೀಸರು ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಶ್ರೀ.ಎಮ್.ಎಸ್.ಆರೋಪಿಪರ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಮಾಧ್ಯಾಹ್ನ ಕೂಗಿಸಲು ಕೋರಿದ್ದು, ಕೇಸನ್ನು ಮಧ್ಯಾಹ್ನ ಕೂಗಿಸುವುದು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಪುನಃ ಪ್ರಕರಣವನ್ನು ಮಧ್ಯಾಹ್ನ 04ಃ00 ಗಂಟೆಗೆ ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ.ಎಮ್.ಎಸ್.ಆರೋಪಿಪರ ವಕೀಲರಿಂದಃ

ಶ್ರೀ.ಎಮ್.ಎಸ್.ವಕೀಲರು 3 ಮತ್ತು 4 ನೇ ಆರೋಪಿತರು ಮೃತ ಪಟ್ಟಿರುವ ಕಾರಣ ಪ್ರಕರಣದ ಬಗ್ಗೆ ಮಾಹಿತಿ ಪಡೆದಿಲ್ಲ ಈ ಕಾರಣಕ್ಕಾಗಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.